**ಅಸಲು ದಾವಾ ನಂಃ 95/2011**
**ಡಿ.ಡಬ್ಲ್ಯೂಃ 2 ,**

**<u>ದಿನಾಂಕ :07-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆ :- ಶ್ರೀ. ಜಿ.ಎಸ್.ಎನ್. ಪ್ರತಿವಾದಿ ಪರ ವಕೀಲರಿಂದ :</u>**

ಸಾಕ್ಷಿಯು ಈ ದಿನ ಹಾಜರು ಪಡಿಸಿರುವ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

ಪಿ.ಕೆ.ಪಿ.ಎಸ್. ಪಾಸ ಪುಸ್ತಕವನ್ನು ನಿಡಿ- 33 ಸಿ.ಸಿ. ನಂ: 507/2019 ಆದೇಶ ಪುಟದ ನಕಲು ನಿಡಿ-34 ಎಂದು, ಎಫ್.ಐ.ಆರ್. ನಕಲು ನಿಡಿ-35 ಎಂದು, ದೂರು ನಕಲು ನಿಡಿ-36 ಎಂದು, ಚಾರ್ಜ ಶೀಟ ನಕಲು ನಿಡಿ-37 ಎಂದು, ಏಫ್. ಐ.ಆರ್. ನಕಲು ನಿಡಿ-38 ಎಂದು, ದೂರು ನಕಲು ನಿಡಿ-39 ಎಂದು, ಚಾರ್ಜ ಶೀಟ ನಕಲು ನಿಡಿ-40 ಎಂದು, ಎಫ.ಐ.ಆರ್. ನಕಲು ನಿಡಿ-41 ಎಂದು, ದೂರು ನಕಲು ನಿಡಿ-42 ಎಂದು, ಚಾರ್ಜಶೀಟ ನಕಲು ನಿಡಿ-43 ಎಂದು, ಹಿಂಬರವನ್ನು ನಿಡಿ-44 ಎಂದು, ಆಧಾರ ಕಾರ್ಡನ್ನು ನಿಡಿ-45 ಎಂದು ಚುನಾವಣೆ ಗುರುತಿನ ಚೀಟಿಯನ್ನು ನಿಡಿ-46 ಎಂದು, ರೇಶನ ಕಾರ್ಡನ್ನು ನಿಡಿ-47 ಎಂದು, ಬ್ಯಾಂಕ ಪಾಸ ಪುಸ್ತಕ ನಿಡಿ- 48 ಎಂದು, ಗುರುತಿನ ಚೀಟಿ ನಿಡಿ-49 ಎಂದು, ಬೆಣ್ಣೆ ತೋರಾ ಯೋಜನೆಯ ಗುರುತಿನ ಚೀಟಿಯನ್ನು ನಿಡಿ- 50 ಎಂದು ಗುರುತಿಸಲಾಯಿತು.

**ಆದ್ದರಿಂದ ದಾವೆಯನ್ನು ವಜಾ ಮಾಡಲು ಕೋರಲಾಯಿತು.**

**<u>ಪಾಟಿ ಸವಾಲು: ಶ್ರಿಮತಿ. ವಿ.ಆರ್.ಕೆ. ವಾದಿ ಪರ ವಕೀಲರಿಂದ :</u>**

ನಿಡಿ-45 ದಿ:12-03-2015 ರಂದು ನೀಡಿರುತ್ತಾರೆ ಎಂದರೆ ಸರಿ. ನಿಡಿ-45 ನ್ನು ಈ ಕೇಸಿಗೋಸ್ಕರ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ . ನಿಡಿ-46 ರ ಮೇಲೆ ದಿ: 17-12-2015 ರಂದು ನೀಡಿರುತ್ತಾರೆ ಎಂದರೆ ಸಾಕ್ಷಿ ಮೊದಲೇ ನೀಡಿರುತ್ತಾರೆ. ನಿಡಿ-46 ನ್ನು ಈ ಕೇಸಿಗೋಸ್ಕರ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ . ನಿಡಿ-47 ರ ಮೇಲೆ ದಿ: 27-10-2009 ರಂದು ನೀಡಿರುತ್ತಾರೆ ಎಂದರೆ ಸರಿ ಸಾಕ್ಷಿ ಮೊದಲು ರೇಶನ ಕಾರ್ಡನ್ನು ನವಿಕರಿಸಿ ಮಾಡಿ ನಿಡಿ-47 ನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಮೊದಲು ನೀಡಿದ ರೇಶನ ಕಾರ್ಡನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲಾ.

**ಅಸಲು ದಾವಾ ನಂಃ 95/2011**
**ಡಿ.ಡಬ್ಲ್ಯೂಃ2 ,**

ನಿಡಿ-48 , 49 ಮತ್ತು 50 ನ್ನು ಈ ದಾವೆ ಸಲ್ಲಿಸಿದ ನಂತರ ಸೃಷ್ಟಸಿದ್ದೇವೆ ಎಂದರೆ ಸರಿಯಲ್ಲ. ನಿಡಿ-33 ನ್ನು ದಿ: 25-09-2014 ರಲ್ಲಿ ನೀಡಿರುತ್ತಾರೆ ಎಂದರೆ ಸಾಕ್ಷಿ ಅವರು ಮೊದಲು ಸದಸ್ಯರು ಇದ್ದರು ಎಂದು ನುಡಿಯುತ್ತಾರೆ. ಮೊದಲು ಸದಸ್ಯರು ಇದ್ದಾರೆ ಎಂದು ಹೇಳಿದ್ದು ಆ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲಾ. ನಿಡಿ-34 ರಿಂದ 44 ಈ ಕೇಸಿಗೆ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ವಾದಿಗೆ ತೊಂದರೆ ಕೊಡುವ ದುರದ್ದೇಶದಿಂದ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ಎಲ್ಲಾ ದಾಖಲೆಗಳನ್ನು ಈ ಕೇಸಿಗೋಸ್ಕರ ಸೃಷ್ಟಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**